


★ ಸಸಿತೋಟ

ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಇತ್ತೀಚೆಗೆ ಆೃಡಂ ಡೇವಿಡ್ ಎಂಬಾತ ಮೈನಸ್ ಐದು ಡಿಗ್ರಿ ಸೆಲ್ಸಿಯಸ್ ಶೀತದಲ್ಲಿ ಅರೆನಗ್ನನಾಗಿ ನಿಂತುಕೊಂಡ. 'ನೇಕೆಡ್ ಇಂಡಿಯನ್' ಹೇಗಿರಬೇಕೆಂದು ಟಿಪ್ಸ್ ಕೇಳಿದನಂತೆ. ಇಂಡಿಯಾಗೇ ಬಂದು ಟಿಪ್ಸ್ ಕೇಳಬಹುದಿತ್ತು ಎನ್ನುತ್ತೀರಾ? ನಿರಾಶೆ ಕಟ್ಟಿಟ್ಟ ಬುತ್ತಿ. ಏಕೆಂದರೆ ಆತ ಕೇಳಿದ್ದು ನಗ್ನ ರೆಡ್ ಇಂಡಿಯನ್ ಬಗ್ಗೆ.



ಕ್ಯೂಬಾ ಎಂದರೆ ಉದ್ದುದ್ದ, ದೊಡ್ಡ ದೊಡ್ಡ ಸಿಗರೇಟ್‌ಗಳು ಕಣ್ಣಿಗೆ ಕಟ್ಟುತ್ತವೆ. ಕಳೆದ ವಾರ ಕ್ಯೂಬಾದ ಹವಾನಾದಲ್ಲಿ ನಡೆದ ಸಿಗರೇಟ್ ಉತ್ಸವದಲ್ಲಿ ಈ ಮಹಿಳೆ ಒಲಿವಿಯಾ ಟೆರ್ರಿ ಉದ್ದನೆಯ ಬೂದಿ ಗುಡ್ಡೆ ಸೃಷ್ಟಿಸುವ ಸ್ಪರ್ಧೆಯಲ್ಲಿ ಗೆದ್ದಾಕೆ. ಈಗಲೇ ಇಷ್ಟುದ್ದ ಬೂದಿ ಗುಡ್ಡೆ ಸೃಷ್ಟಿಸಿದರೆ ಶೀಘ್ರ ಜೀವನದ ಕೊನೆಯ ಬೂದಿ ಗುಡ್ಡೆ ಸೇರಬಹುದು.



ಅಮೆರಿಕಾದ ಕೊಲರೆಡೋದಲ್ಲಿ ಮಾದಕ ದ್ರವ್ಯ ಮಾರಿಜುವಾನ ಸೇವನೆಯನ್ನು ಕಾನೂನುಬದ್ಧಗೊಳಿಸಿದ ನಂತರ ಅಲ್ಲಿಯ ಪಶು ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆಯಂತೆ. ಸಾಕು ನಾಯಿಗಳು ಎರ್ರಾಬಿರ್ರಿ ಮಾರಿಜುವಾನ ಸೇವಿಸಿ ಆಸ್ಪತ್ರೆ ಸೇರುತ್ತಿವೆಯಂತೆ. ಅದೂ ಬೇಕರಿ ತಿನಿಸುಗಳಲ್ಲಿ ಬೆರೆಸಿದ ಮಾರಿಜುವಾನ ಸೇವಿಸಿ. ಮಾರಿಜುವಾನ- ಫ್ರೀ ತಿನಿಸು ಕೇಳಿ ಖರೀದಿಸಬೇಕೆಂದು ಅವುಗಳಿಗೆ ಹೇಗೆ ಗೊತ್ತಾಗಬೇಕು?

ಸ್ಪೇನಿನ ಲಾರ್ಝಾ ಗ್ರಾಮದಲ್ಲಿ 'ಓ ಎಂಟ್ರೊಯ್ಡೊ' ಎಂಬ ಹಬ್ಬ ಈಚೆಗೆ ನಡೆಯಿತು. ಇದರ ವಿಶೇಷ ಹಿಟ್ಟಿನಲ್ಲಿ ಹೊಡೆದಾಡುವುದು. ಹಿಟ್ಟಿನ ಬದಲು ಸಿಟ್ಟಿನಲ್ಲಿ ಹೊಡೆದಾಡಿದರೆ...! ಪೊಲೀಸರು ಕಾದುಕೊಂಡೇ ಇರಬಹುದು.



ಆ್ಯಮ್‌ಸ್ಟರ್‌ಡ್ಯಾಮಿನಲ್ಲಿರುವ 'ಹಾಟ್ ಟಬ್ ಮೂವಿ ಕ್ಲಬ್' ಇದು. ಅಂದರೆ ಪ್ಲಾಸ್ಟಿಕ್ ಟಬ್‌ನಲ್ಲಿ ತಲಾ ಒಂದು ಸಾವಿರ ಲೀಟರ್ ಬಿಸಿ ನೀರು ಭರ್ತಿ ಮಾಡಿ ಅದರಲ್ಲಿ ಕುಳಿತುಕೊಂಡು ಸಿನಿಮಾ ವೀಕ್ಷಿಸುವುದು. ಮಜಾ ಬರುತ್ತದೋ ಇಲ್ಲವೋ ಗೊತ್ತಿಲ್ಲ, ತ್ಯಜಿಸಿದ ಕಾರ್ಖಾನೆಯಲ್ಲಿ ಈ ರೀತಿ ಕ್ಲಬ್ ಮಾಡಿಕೊಂಡ ನಿರುದ್ಯೋಗಿ ಯುವಕನೊಬ್ಬ ದುಡ್ಡು ಮಾಡಿ ಮಜಾ ಉಡಾಯಿಸುತ್ತಿದ್ದಾನೆ.



ಮೇರಿಲ್ಯಾಂಡ್‌ನ 38 ವರ್ಷದ ಡ್ಯಾನ್ ಜಾನ್ಸನ್ ಕಳೆದ 25 ವರ್ಷಗಳಿಂದ ಡಯಟ್ ಮಾಡುತ್ತಿದ್ದಾನೆ. ಆತನ ಡಯಟ್ ತಿನಿಸೆಂದರೆ ಪಿಜ್ಜಾ ಮತ್ತು ಕಾಫಿ. ತರಕಾರಿಯೂ ಸೇರದು, ಮಾಂಸ ಸೇವನೆ ವಿರೋಧಿ. ಪಿಜ್ಜಾ ಮಾರುಕಟ್ಟೆ ವಿಸ್ತರಣೆಗೆ ಇಂಥವರ ಅವಶ್ಯಕತೆ ಬಹಳಷ್ಟಿರಬಹುದು.